# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 129

ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 05-07-2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯ ಸರ್ಕಾರ ಸಾರಿಗೆ ಇಲಾಖೆಯಲ್ಲಿ ಕೇಂದ್ರ ಸರ್ಕಾರದಿಂದ ರೂಪಿತವಾಗಿರುವ ಯಾವ ಕಾಯಿದೆಗಳನ್ನು ಅನುಷ್ಠಾನಗೊಳಿಸುತ್ತಿದೆ ಮತ್ತು ಈ ಕಾಯಿದೆಗಳ ಅನುಷ್ಠಾನಕ್ಕೆ ಅಗತ್ಯವಿರುವ ನಿಯಮಗಳನ್ನು ಕಾಲ ಕಾಲಕ್ಕೆ ರೂಪಿಸಲಾಗುತ್ತಿದೆಯೇ; (ಪೂರ್ಣ ಮಾಹಿತಿ ನೀಡುವುದು) | ರಾಜ್ಯ ಸರ್ಕಾರವು, ಸಾರಿಗೆ ಇಲಾಖೆಯಲ್ಲಿ ಕೇಂದ್ರ ಸರ್ಕಾರದಿಂದ ರೂಪಿತವಾಗಿರುವ ಮೋಟಾರು ವಾಹನಗಳ ಕಾಯ್ದೆ 1988, ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಸದರಿ ಕಾಯ್ದೆ ಮತ್ತು ನಿಯಮಗಳಿಗೆ ಸಂಬಂಧಿಸಿದಂತೆ ಕಾಲ-ಕಾಲಕ್ಕೆ ಕೇಂದ್ರ ಸರ್ಕಾರದಿಂದ ಮಾಡಲಾಗುವ ತಿದ್ದುಪಡಿಗಳನುಸಾರ ಕ್ರಮ ವಹಿಸಲಾಗುತ್ತಿದೆ.<br>ಮುಂದುವರೆದು, ಕರ್ನಾಟಕ ರಾಜ್ಯದ ಸಾರಿಗೆ ಇಲಾಖೆಯಲ್ಲಿ ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989 ಮತ್ತು ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ ಮತ್ತು ನಿಯಮಗಳು 1957ನ್ನು ರೂಪಿಸಲಾಗಿದೆ. |
| ಆ. | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಸಾರ್ವಜನಿಕ ಡಿಜಿಟಲ್ ವೇದಿಕೆಯಾದ e-transport mission mode project ಅಡಿಯಲ್ಲಿ ಸಾರಿಗೆ ಇಲಾಖೆಯಲ್ಲಿ ಅನುಷ್ಠಾನಗೊಳಿಸಲಿರುವ ವಿವಿಧ ಸೇವೆಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ವಿವರಗಳನ್ನು **ಅನುಬಂಧ-1 ಮತ್ತು ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಇ. | ಈ ಸಾರ್ವಜನಿಕ ಡಿಜಿಟಲ್ ವೇದಿಕೆಯಡಿಯಲ್ಲಿ ಸೇವೆಗಳು ಒದಗಿಸುತ್ತಿರುವ ಇತರೆ ಇಲಾಖೆಗಳು ಯಾವುವು; ಈ ಇಲಾಖೆಗಳ ಮುಖೇನ ಒದಗಿಸುತ್ತಿರುವ ಸೇವೆಗಳನ್ನು ಸಕ್ರಿಯವಾಗಿ ನಿರ್ವಹಿಸಲು ನಿಯೋಜಿಸಿರುವ ನೋಡಲ್ ಇಲಾಖೆ ಯಾವುದು; (ಪೂರ್ಣ ಮಾಹಿತಿ ನೀಡುವುದು) | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ) ಇಲಾಖೆಯ ಅಡಿಯಲ್ಲಿ ಬರುವ ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ ಬೆಂಗಳೂರು ಒನ್, ಕರ್ನಾಟಕ ಒನ್ ಮತ್ತು ಮೊಬೈಲ್ ಒನ್ ಮೂಲಕ ಸಾರಿಗೆ ಇಲಾಖೆಯ ಕೆಲವು ಸೇವೆಗಳನ್ನು ಸಾರ್ವಜನಿಕರಿಗೆ ಒದಗಿಸಲಾಗುತ್ತಿದೆ.<br>ದಿನಾಂಕ:17-10-2015ರಂದು ಸಾರಿಗೆ ಇಲಾಖೆ ಮತ್ತು Directorate of Electronic Delivery of Citizen Services (EDCS) ನಡುವೆ ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಮೂಲಕ ಡಿ.ಎಲ್ ಮತ್ತು ಆರ್.ಸಿ ಎಕ್ಸ್‌ಟ್ರಾಕ್ಟ್‌ಗಳನ್ನು ನೀಡಲು ಒಪ್ಪಂದ ಮಾಡಿಕೊಳ್ಳಲಾಯಿತು ಮತ್ತು ದಿನಾಂಕ: 16-10-2017 ರಂದು ಸಾರಿಗೆ ಇಲಾಖೆ ಮತ್ತು EDCS ನಡುವೆ ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಮೂಲಕ (1) New LL, (2) Change of Address in LL, (3) Additional |

| | | |
|---|---|---|
| | | endorsement in LL, (4) Printing of LL & (5) New DL ಸೇವೆಗಳನ್ನು ನೀಡಲು ಒಪ್ಪಂದ ಮಾಡಿಕೊಳ್ಳಲಾಗಿದೆ.<br>ಪ್ರಸ್ತುತ ಬೆಂಗಳೂರು ಒನ್, ಕರ್ನಾಟಕ ಒನ್ ಮತ್ತು ಮೊಬೈಲ್ ಒನ್ ಮೂಲಕ ಡಿ.ಎಲ್ ಮತ್ತು ಆರ್.ಸಿ ಎಕ್ಸ್ ಟ್ರಾಕ್ಟ್ ಗಳ ಸೇವೆಯನ್ನು ನೀಡಲಾಗುತ್ತಿದೆ. ಸಿಆಸುಇ (ಇ-ಆಡಳಿತ) ಇಲಾಖೆಯು ಸದರಿ ಸೇವೆಗಳನ್ನು ಸಕ್ರಿಯವಾಗಿ ನಿರ್ವಹಿಸಲು ನಿಯೋಜಿಸಿರುವ ನೋಡಲ್ ಇಲಾಖೆ ಆಗಿರುತ್ತದೆ. |

| | | |
|---|---|---|
| ಈ. | e-transport mission mode project ತಂತ್ರಾಂಶವನ್ನು ಸಿದ್ಧಪಡಿಸಿದ ಸಂಸ್ಥೆ ಯಾವುದು ಮತ್ತು ಈ ತಂತ್ರಾಂಶವನ್ನು ಮೇಲಿಂದ ಮೇಲೆ ನವೀಕರಿಸಲಾಗುತ್ತಿದೆಯೇ; (ಹಾಗಿದ್ದಲ್ಲಿ ಪೂರ್ಣ ಮಾಹಿತಿ ನೀಡುವುದು) | e-Transport mission mode project ತಂತ್ರಾಂಶವನ್ನು ಕೇಂದ್ರ ಸರ್ಕಾರದ Ministry of Electronics & Information Technology ಇಲಾಖೆಯ ಅಡಿಯಲ್ಲಿ ಬರುವ ಎನ್.ಐ.ಸಿ. ಸಂಸ್ಥೆಯವರು ಸಿದ್ಧಪಡಿಸಿರುತ್ತಾರೆ ಮತ್ತು ಸದರಿ ತಂತ್ರಾಂಶವನ್ನು ಮೇಲಿಂದ ಮೇಲೆ ನವೀಕರಿಸಲಾಗುತ್ತಿದೆ. |
| ಉ | ಈ ತಂತ್ರಾಂಶದಲ್ಲಿ ಒಂದು ಪ್ರಾದೇಶಿಕ ಸಾರಿಗೆ ಕಛೇರಿಯಿಂದ ಇನ್ನೊಂದು ಪ್ರಾದೇಶಿಕ ಕಛೇರಿಗೆ ದತ್ತಾಂಶಗಳ ವರ್ಗಾವಣೆಯಲ್ಲಿ ಸಾಕಷ್ಟು ಸಮಸ್ಯೆ ಮತ್ತು ಸವಾಲುಗಳು ಎದುರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಸಮಸ್ಯೆ ಮತ್ತು ಸವಾಲುಗಳ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು) | ಸಾರಿಗೆ ಇಲಾಖೆಯಲ್ಲಿ 2018-19ನೇ ಸಾಲಿನವರೆಗೂ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಎನ್.ಐ.ಸಿ. ರವರು ಅಭಿವೃದ್ಧಿ ಪಡಿಸಿರುವ ವಾಹನ್-1 ತಂತ್ರಾಂಶವನ್ನು ಉಪಯೋಗಿಸಲಾಗುತ್ತಿತ್ತು. ಸದರಿ ವಾಹನ್-1 ತಂತ್ರಾಂಶವು client server architecture ಆಗಿದ್ದು ಆಯಾಯಾ ಕಛೇರಿಗಳಲ್ಲಿ ಸ್ವತಂತ್ರ ಸರ್ವರ್ ಗಳನ್ನು ಹೊಂದಿ ಕಛೇರಿಗಳ ಡಾಟಾಗಳು ಅದರಲ್ಲಿ ಸಂಗ್ರಹವಾಗುತ್ತಿತ್ತು.<br>ಪ್ರಸ್ತುತ ಸಾರಿಗೆ ಇಲಾಖೆಯ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಅಳವಡಿಸಿರುವ ವಾಹನ್-4 ತಂತ್ರಾಂಶವು ಕೇಂದ್ರಿಕೃತ ವೆಬ್ ಆಧಾರಿತ ತಂತ್ರಾಂಶವಾಗಿದ್ದು, ವಾಹನ್-1 ತಂತ್ರಾಂಶದಲ್ಲಿ ಒಂದು ಕಛೇರಿಯಿಂದ ಇನ್ನೊಂದು ಕಛೇರಿಗೆ ವಾಹನಗಳು ವಲಸೆ ಹೋದ ಸಂದರ್ಭಗಳಲ್ಲಿ ಅಂತಹ ವಾಹನಗಳ ಡಾಟಾಗಳು ಆ ಎಲ್ಲಾ ಕಛೇರಿಗಳಲ್ಲೂ ಗೋಚರಿಸುತ್ತಿತ್ತು. ವಾಹನ್-1 ತಂತ್ರಾಂಶದಿಂದ ಡಾಟಾಗಳನ್ನು ವಾಹನ್-4 ತಂತ್ರಾಂಶಕ್ಕೆ ವರ್ಗಾವಣೆ ಮಾಡಿದ ಸಂದರ್ಭದಲ್ಲಿ ಅಂತಹ ವಾಹನಗಳ ಡಾಟಾಗಳು ಒಂದಕ್ಕಿಂತ ಹೆಚ್ಚಿನ ಕಛೇರಿಗಳನ್ನು ತೋರಿಸುತ್ತಿರುವುದರಿಂದ ಈ ರೀತಿ ಸಮಸ್ಯೆ ಮತ್ತು ಸವಾಲುಗಳು ಎದುರಾಗಿದ್ದು, ಸದರಿ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುವ ಸಲುವಾಗಿ ತಂತ್ರಾಂಶದಲ್ಲಿ De-duplication module ಅನ್ನು ಎನ್.ಐ.ಸಿ. ರವರು ಪರಿಚಯಿಸಲಾಗಿದ್ದು, ಇದರಿಂದ ಇಂತಹ ಸಮಸ್ಯೆಗಳ ನಿವಾರಣೆಯಾಗುತ್ತಿದೆ. |

ಟಿಡಿ 28 ಟಿಡಿಕ್ಯೂ 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ, (ನಾಮನಿರ್ದೇಶನ ಹೊಂದಿದವರು)**
**ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 129 ಕ್ಕೆ ಅನುಬಂಧ-1**

| **VAHAN Contactless Services** |
|---|
| 1. Dealer Registration |
| 2. Transfer of ownership |
| 3. Change of address |
| 4. Issue of Duplicate RC |
| 5. Hypothecation Addition |
| 6. Hypothecation Continuation |
| 7. Issue of NOC |
| 8. RC extract |
| 9. Issue of permit for Goods Vehicle |
| 10. Issue of Permit for Motor cab |
| 11. Renewal of Permit for Goods Vehicle |
| 12. Renewal of Permit for Luxury Taxi (Motor Cab) |
| 13. Renewal of Permit for Auto-Rickshaw |
| 14. Issue of Duplicate Permit for Goods Vehicle) |
| 15. Issue of Duplicate Permit for Passenger/Taxi Vehicles |
| 16. Issue of Duplicate Permit for Auto-Rickshaw |
| 17. Surrender of Permit (Permit Cancellation ) |
| 18. Temporary Permit |
| 19. Special permit |
| 20. Fresh permit for NP authorization |
| 21. Renewal of National permit authorization |
| 22. Payment of Road Tax |
| 23. Mobile No. Updation |
| 24. Print Fitness Certificate |
| 25. Print No Objection Certificate |
| |
| **VAHAN Non-Contactless Services** |
| 1. Fitness Inspection/Certificate |
| 2. Re-assignment of Registration number |
| 3. Alteration Of Vehicle |
| 4. RC Surrender |
| 5. Hypothecation Termination |

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ, (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 129 ಕ್ಕೆ ಅನುಬಂಧ-2**

| | | |
|---|---|---|
| **SARATHI Contactless Services** | | |
| 1 | **LL** | New Learner License |
| 2 | | Change of Name in LL |
| 3 | | Change of Address in LL |
| 4 | | Duplicate of LL |
| 5 | **DL** | Change of Address in DL |
| 6 | | Change of Name in DL |
| 7 | | Duplicate DL |
| 8 | | Renewal of DL |
| 9 | | International Driving Permit |
| 10 | | DL Extract |
| 11 | **CL** | Issue Of Conductor License With Badge Distribution |
| 12 | | Renewal of CL |
| 13 | | Duplicate Conductor License |
| 14 | | Change of Address in CL |
| 15 | | Change of Name in CL |
| **SARATHI Non-Contactless Services** | | |
| 1 | **DL** | New Driving License |
| 2 | | New Driving License for Foreign DL/Defence DL Holder |
| 3 | | Additional Endorsement of DL |
| 4 | | Additional Endorsement For Defence DL Holder |
| 5 | | Re-Validation of DL (Renewal + Retest) |
| 6 | | Replacement of DL |
| 7 | | Endorsement To Drive Hazardous Material |
| 8 | | Endorsement To Drive In Hill Region |
| 9 | | Surrender Of Cov(S) / Psv Badge(S) |
| 10 | | Change of Biometrics in CL |
| 11 | **DSL** | Issue of New Driving School |
| 12 | | Duplicate Driving School License |
| 13 | | Renewal Of Driving School License |